ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

SC No. 57/2025

ಪಿರ್ಯಾದುದಾರರು : ಸರ್ಕಾರದ ಪರ ನೆಲಮಂಗಲ ಟೌನ್ ಪೊಲೀಸರು

- ವಿರುದ್ಧ -

ಆರೋಪಿಗಳು : 1. ಉಮೇಶ್
ತಂದೆ: ಕೆಂಪಣ್ಣ
ವಯಸ್ಸು 31 ವರ್ಷ
ವಾಸ: ಕೇರ್ ಆಫ್ ನಾರಾಯಣಪ್ಪ,
ಭಕ್ತನಪಾಳ್ಯ, ಕಸಬಾ ಹೋಬಳಿ, ನೆಲಮಂಗಲ
ತಾಲ್ಲೂಕು, ಬೆಂಗಳೂರು ಜಿಲ್ಲೆ 562 123.

ಸ್ಥಂತ ವಾಸ : ಕಬ್ಬಾಳಿ ಗ್ರಾಮ, ಹಿರೆಸೆವೆ ಹೋಬಳಿ,
ಚೆನ್ನರಾಯಪಟ್ಟಣ ತಾಲ್ಲೂಕು,
ಹಾಸನ.

ದೋಷಾರೋಪಣೆ

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ಉಮೇಶ್ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 29.03.2019 ರಂದು ರಾತ್ರಿ 8.00 ಗಂಟೆಯ ಸಮಯದಲ್ಲಿ ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ನೆಲಮಂಗಲ ಟೌನ್ ಪೊಲೀಸ್ ಠಾಣಾ ಸರಹದ್ದು, ಭಕ್ತನಪಾಳ್ಯ ದಿಂದ ಚಾಸಾ. 1 ರವರನ್ನು ಅವರ ಮನೆಯಿಂದ ಪ್ರಕರಣ ಬೇರ್ಪಟ್ಟಿರುವ ಆರೋಪಿ ನಂ. 2 ರವರು ಯಾರೋ ಹಣ ಕೊಡಬೇಕು ಪಡೆದುಕೊಂಡು ಬರೋಣ ಬಾ ಎಂದು ಹೇಳಿ ಕರೆದುಕೊಂಡು ರತನ್ ಶಾಲೆಯ ಬಳಿ ಪೂರ್ವ ನಿಯೋಜನೆಯಂತೆ ಕರೆದುಕೊಂಡು ಬಂದಿದ್ದು ಆಗ ಮೃತಪಟ್ಟಿರುವ ಆರೋಪಿ ನಂ. 4 ಮತ್ತು ಪತ್ತೆಯಾಗದ 5 ನೇ ಆರೋಪಿಯು ಸೇರಿ KA-01/MC-567 ಅಸೆಂಟ್ ಕಾರನ್ನು ಅಲ್ಲಿ ನಿಲ್ಲಿಸಿಕೊಂಡು ನಿಂತಿದ್ದು ಆ ಕಾರಿನಲ್ಲಿ ಚಾಸಾ. 1 ರವರನ್ನು ಕೂರಿಸಿಕೊಂಡು ಹೋಗುತ್ತಿದ್ದಾಗ ಇದನ್ನು

ಪ್ರಶ್ನಿಸಿದ ಚಾಸಾ. 1 ರವರಿಗೆ ಪ್ರಕರಣ ಬೇರ್ಪಟ್ಟಿರುವ ಆರೋಪಿ ನಂ. 2 ಮತ್ತು ಮೃತಪಟ್ಟ ಆರೋಪಿ ನಂ. 4 ರವರುಗಳು ಕೈಗಳನ್ನು ಮತ್ತು ಬಾಯಿಯನ್ನು ವೇಲ್ ನಿಂದ ಕಟ್ಟಿ ಕೂಗಾಡದಂತೆ ಮಾಡಿ ಅಪಹರಿಸಿಕೊಂಡು ಹೋಗಿ ಚಾಸಾ. 3 ರವರಿಂದ ಬಾಡಿಗೆಗೆ ಪಡೆದು ವಾಸವಿದ್ದ ಮೃತಪಟ್ಟ 3 ನೇ ಆರೋಪಿ ಮತ್ತು 1 ನೇ ಆರೋಪಿಯಾದ ನಿನ್ನ ಮನೆಯಲ್ಲಿ ಯಾರಿಗೂ ತಿಳಿಯದಂತೆ ಅಕ್ರಮವಾಗಿ ಕೂಡಿ ಹಾಕಿದ್ದು ನಂತರ ದಿನಾಂಕ 29.03.2019 ರಿಂದ 17.04.2019 ರವರೆಗೆ ಎಡೆಬಿಡದೆ ಕಾದು ಈ ವೇಳೆ 1 ನೇ ಆರೋಪಿಯಾದ ನೀನು, ಪ್ರಕರಣ ಬೇರ್ಪಟ್ಟಿರುವ 2 ಆರೋಪಿ, ಮೃತಪಟ್ಟಿರುವ 3, 4 ನೇ ಆರೋಪಿತರು ಹಾಗೂ ಪತ್ತೆಯಾಗದೇ ಇರುವ 5 ನೇ ಆರೋಪಿತರು ಸೇರಿಕೊಂಡು ಏಕೋದ್ದೇಶದಿಂದ ಚಾಸಾ. 1 ರವರಿಗೆ ನಿನ್ನ ಬಳಿ ಹೆಚ್ಚಿನ ಹಣವಿರುವುದಾಗಿ ನಮಗೆ ಮಾಹಿತಿ ಇದೆ ನೀನು ನಮಗೆ 5 ಲಕ್ಷ ಹಣ ಕೊಟ್ಟರೆ ನಿನ್ನನ್ನು ಬಿಟ್ಟು ಬಿಡುತ್ತೇವೆಂದು ಇಲ್ಲದಿದ್ದರೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆಯನ್ನು ಹಾಕಿದ್ದು, ಚಾಸಾ. 1 ರವರು ನನ್ನ ಬಳಿ ಯಾವುದೇ ಹಣವಿಲ್ಲ, ನನ್ನ ಬಳಿ ಒಂದು ಜೊತೆ ಕಾಲು ಚೈನು, ನನ್ನ ಮಗಳ ಉಳಿತಾಯ ಖಾತೆಯಲ್ಲಿ ರೂ. 13,000/- ನಗದು ಬಿಟ್ಟರೆ ಬೇರೆ ಏನು ಇಲ್ಲವೆಂದು ತಿಳಿಸಿದರೂ ಸಹ ಕೇಳದೆ ಚಾಸಾ. 1 ರವರ ಮೊಬೈಲ್ ಸಂಖ್ಯೆ 7090203755 ರಿಂದ ಚಾಸಾ. 2 ರವರ 9353389459 ಮೊಬೈಲ್ ಗೆ ಚಾಸಾ. 1 ರವರಿಂದ ಫೋನ್ ಮಾಡಿಸಿ ಪೊಲೀಸರು ನನ್ನನ್ನು ಹಿಡಿದುಕೊಂಡಿದ್ದಾರೆ ಅವರಿಗೆ ಹಣ ಕೊಟ್ಟರೆ ನನ್ನನ್ನು ಬಿಡುತ್ತಾರೆ ಆದ್ದರಿಂದ ನೀನು ನನಗೆ ಪರಿಚಯ ಇರುವವರ ಬಳಿ ನಮ್ಮ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಆಸ್ಪತ್ರೆಗೆ ದಾಖಲು ಮಾಡಿದ್ದೇವೆ ಅವರಿಗೆ ಚಿಕಿತ್ಸೆ ಕೊಡಿಸಲು ಹಣದ ಅವಶ್ಯಕತೆ ಇರುವುದಾಗಿ ಸುಳ್ಳು ಹೇಳಿ ಹಣವನ್ನು ಹೊಂದಿಸಿ ಇಟ್ಟುಕೊಳ್ಳುವಂತೆ ನಂತರ ನಾನು ಹೇಳಿದವರಿಗೆ ಆ ಹಣವನ್ನು ಕೊಟ್ಟು ಕಳುಹಿಸುವಂತೆ ಚಾಸಾ. 1 ರವರಿಂದ ಚಾಸಾ. 2 ರವರಿಗೆ ಹೇಳಿಸಿದ್ದು ಚಾಸಾ. 2 ರವರು ಹಣವನ್ನು ಹೊಂದಿಸಲು ಸಾಧ್ಯವಾಗದೇ ಇದ್ದಾಗ ಚಾಸಾ. 1 ರವರ ಕಡೆಯಿಂದ ಚಾಸಾ. 2 ರವರಿಗೆ ಫೋನ್ ಮಾಡಿಸಿ ಮನೆಯಲ್ಲಿರುವ ಒಂದು ಜೊತೆ ಕಾಲು ಚೈನು, ರೇಷನ್ ಕಾರ್ಡ್, ಚಾಸಾ. 2 ರವರ ಬ್ಯಾಂಕ್ ಪಾಸ್ ಪುಸ್ತಕ ಮತ್ತು ಆಧಾರ್ ಕಾರ್ಡುಗಳನ್ನು ಪ್ರಕರಣ ಬೇರ್ಪಟ್ಟಿರುವ 2 ನೇ ಆರೋಪಿ ರವರ ಕಡೆ ಕೊಡುವಂತೆ ಚಾಸಾ. 1 ರವರ ಕಡೆಯಿಂದ ಚಾಸಾ. 2 ರವರಿಗೆ ಫೋನ್ ಮಾಡಿ ತಿಳಿಸಿ

ನಂತರ ಪ್ರಕರಣ ಬೇರ್ಪಟ್ಟಿರುವ 2 ನೇ ಆರೋಪಿ ಕಡೆಯಿಂದ ತರಿಸಿಕೊಂಡು 1 ನೇ ಆರೋಪಿಯಾದ ನೀನು ಮತ್ತು ಮೃತಪಟ್ಟ 3 ನೇ ಆರೋಪಿ ರವರ ಮನೆಯಲ್ಲಿ ಇಟ್ಟುಕೊಂಡಿದ್ದು, ದಿನಾಂಕ 17.04.2019 ರಂದು 1 ನೇ ಆರೋಪಿಯಾದ ನೀನು ಮತ್ತು ಮೃತಪಟ್ಟ 3 ನೇ ಆರೋಪಿ ರವರುಗಳು ಚಾಸಾ. 1 ರವರನ್ನು ಕೂಡಿ ಹಾಕಿ ಎಲ್ಲಿಯೋ ಹೋಗಿದ್ದಾಗ ಚಾಸಾ. 1 ರವರು ಸಮಯ ನೋಡಿ ಚಾಸಾ. 3 ರವರಿಗೆ ಕಿಟಕಿಯಿಂದ ವಿಚಾರವನ್ನು ತಿಳಿಸಿದಾಗ ಚಾಸಾ. 3 ರವರು ಚಾಸಾ. 15 ಮತ್ತು 16 ರವರಿಗೆ ಮಾಹಿತಿಯನ್ನು ನೀಡಿ ಕರೆಸಿಕೊಂಡು ಅವರುಗಳ ಮುಖಾಂತರ ಚಾಸಾ. 1 ರವರನ್ನು ಬಿಡುಗಡೆ ಮಾಡಿಸಿದ್ದು ಮತ್ತು ಈ ಕಾರಣದಿಂದ 1 ನೇ ಆರೋಪಿಯಾದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಕಲಂ 364(ಎ), 368 ಜೊತೆಗೆ 34 ಐಪಿಸಿ ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಈ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಇದ್ದು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದಿನ ದಿನಾಂಕ 29 ನೇ ಡಿಸೆಂಬರ್, 2025)

(ಶ್ರೀಮತಿ ಬಿ.ಎಸ್.ರೇಖಾ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.